H2

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019–20ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸರ್ಕಾರದ ಅನುಮೋದನೆಯನ್ನು ನೀಡಿದ್ದು, ಘಟನೋತ್ತರ ಅನುಮೋದನೆಯನ್ನು ನೀಡುವ ಬಗ್ಗೆ.

ಓದಲಾಗಿದೆ: 1. ತಮ್ಮ ಪತ್ರ ಸಂಖ್ಯೆ: ಮುಲೆಅ/ಆಯವ್ಯಯ/2019–20/ಪಿಆರ್/06/2018–19, ದಿನಾಂಕ: 01–03–2019.
2. ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ: 22–05–2019.
3. ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ಸಂಖ್ಯೆ: CM/42762/MIN (GOK)/2019, ದಿನಾಂಕ: 22–08–2019.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 01–03–2019ರ ಪ್ರಸ್ತಾವನೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವೀಕೃತಿ ಮತ್ತು ವೆಚ್ಚಗಳನ್ನು ಪಾಲಿಕೆಯ ಸ್ವಂತ ಮೂಲಗಳಿಂದ ಸಂಗ್ರಹಿಸಿದ ಆದಾಯ ಮತ್ತು ಸರ್ಕಾರದಿಂದ ಸ್ವೀಕರಿಸಿದ ಅದಾಯದ ಆಧಾರದ ಮೇಲೆ ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ ಸಂ	ವಿವರಗಳು	2017–18 ಲೆಕ್ಕಪತ್ರ		2018–19 (ಅಂದಾಜಿಸಿದ)		2019–20 (ಕರಡು –ಆಯವ್ಯಯ)	
		ಸ್ವೀಕೃತಿ	ವೆಚ್ಚ	ಸ್ವೀಕೃತಿ	ವೆಚ್ಚ	ಸ್ವೀಕೃತಿ	ವೆಚ್ಚ
1	ಪಾಲಿಕೆಯ ಸ್ವಂತ ಮೂಲಗಳಿಂದ ಸಂಗ್ರಹಿಸಿದ ಆದಾಯ ಮತ್ತು ವೆಚ್ಚ	3291.35	3757.12	3766.64	3930.29	9351.68	9900.43
2	ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ವೀಕರಿಸಿದ ಅನುದಾನ ಮತ್ತು ವೆಚ್ಚ	4029.97	3638.98	3613.11	3449.83	3606.11	3057.84
	ಒಟ್ಟು	7321.32	7396.10	7379.75	7380.12	12957.79	12958.27

2. 2019–20ನೇ ಸಾಲಿನ ಆಯವ್ಯಯವನ್ನು 2017–18 ಮತ್ತು 2018–19ನೇ ಸಾಲಿನ ಲೆಕ್ಕಪತ್ರಗಳಿಗೆ ಹೋಲಿಸಿದಾಗ ಶೇಕಡವಾರು ವಿವರಗಳು ಈ ಕೆಳಕಂಡಂತ್ತಿರುತ್ತವೆ.

ಕ್ರ ಸಂ	ವಿವರಗಳು	2017–18 ಸಾಲಿನ ಲೆಕ್ಕಪತ್ರಗಳಿಗೆ ಹೋಲಿಸಿದಾಗ 2019–20ನೇ ಸಾಲಿನ ಅಂದಾಜು (%)		2018–19ನೇ ಸಾಲನ ಅಂದಾಜಿತ ಲೆಕ್ಕಪತ್ರಗಳಿಗೆ ಹೋಲಿಸದಾಗ 2019–20ನೇ ಸಾಲಿನ ಅಂದಾಜು(%)	
		ಸ್ವೀಕೃತಿ	ವೆಚ್ಚ	ಸ್ವೀಕೃತಿ	ವೆಚ್ಚ
1	ಪಾಲಿಕೆಯ ಸ್ವಂತ ಮೂಲಗಳಿಂದ ಸಂಗ್ರಹಿಸಿದ ಆದಾಯ ಮತ್ತು ವೆಚ್ಚ	184.13%	163.51%	148.51%	151.90%

. . . 2 .

2	ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ವೀಕರಿಸಿದ ಅನುದಾನ ಮತ್ತು ವೆಚ್ಚ	-10.52%	-15.97%	-0.19%	-11.36%
	ಒಟ್ಟು	173.61%	147.54%	148.09%	140.54%

3. ಆಯವ್ಯಯದಲ್ಲಿ ನಿರೀಕ್ಷಿತ ಆದಾಯ ಬರದಿದ್ದರೂ ಸಹ ವೆಚ್ಚಗಳಿಗೆ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಜಾಬ್ ಸಂಖ್ಯೆಯನ್ನು ಪಡೆದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಪ್ರತಿ ವರ್ಷ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಬಿಲ್ಲುಗಳ ಅಂತರ ಹೆಚ್ಚಾಗುತ್ತಿದ್ದು (ಪ್ರಸ್ತುತ ಸುಮಾರು 2 ವರ್ಷಗಳ ಅಂತರವಿರುತ್ತದೆ), ಪಾಲಿಕೆಗೆ ಹೆಚ್ಚು ಆರ್ಥಿಕ ಹೊರ ಉಂಟಾಗುತ್ತಿರುತ್ತದೆ.

4. ಪಾಲಿಕೆಯಲ್ಲಿ ವಾಸ್ತವಿಕ ಆದಾಯ ಸ್ವೀಕೃತಿಗಳನ್ನು ಪರಿಗಣಿಸದೇ, ಆಯವ್ಯಯವು ಅನುಮೋದನೆಯಾಗುತ್ತಿರುವುದರಿಂದ ಪಾಲಿಕೆಯ ಹಣಕಾಸು ನಿರ್ವಹಣೆಯಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿರುತ್ತದೆ. ಆದ್ದರಿಂದ ಸರ್ಕಾರದ ಆಯವ್ಯಯ ತಯಾರಿಕೆಯಲ್ಲಿ ಪಾಲಿಸುತ್ತಿರುವ ಶಿಸ್ತಿನಂತೆ ಪಾಲಿಕೆಯಲ್ಲಿಯೂ ಸಹಾ ಪಾಲಿಕೆಯ ವಾಸ್ತವಿಕ ಸ್ವೀಕೃತಿಗೆ ಅನುಗುಣವಾಗಿ ವೆಚ್ಚಗಳಿಗೆ ಅವಕಾಶ ಕಲ್ಪಿಸಿಕೊಳ್ಳುವಂತೆ ಮಾಡುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸುತ್ತಾ, 2018-19ನೇ ಸಾಲಿನ ಆಯವ್ಯಯಕ್ಕೆ ವಾಸ್ತವಿಕ ಸ್ವೀಕೃತಿಗಳ ಅಧಾರದ ಮೇಲೆ ಅನುಮೋದನೆ ನೀಡಲು ಸರ್ಕಾರಕ್ಕೆ ಕೋರಲಾಗಿತ್ತು. ಆದರೂ ಸಹಾ ಪಾಲಿಕೆಯ ವಾಸ್ತವಿಕ ಆದಾಯ ಮತ್ತು ವೆಚ್ಚಗಳ ವಿವರಗಳನ್ನು ಪರಿಗಣಿಸದೆ, ಕೌನ್ಸಿಲ್ ಸಭೆ ಅನುಮೋದನೆ ಮಾಡಿದ ಮೊತ್ತ ರೂ.10,129.48 ಕೋಟಿಗಳಾಗಿರುತ್ತದೆ.

5. ಸರ್ಕಾರದ ಅ.ಸ. ಪತ್ರ ಸಂಖ್ಯೆ: ನಅಇ 476 ಎಂಎನ್‌ವೈ 2018 (ಭಾಗ-1), ದಿನಾಂಕ: 18-02-2019 ರಲ್ಲಿ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಆದರೆ, ಆಯವ್ಯಯದಲ್ಲಿ ನಿರೀಕ್ಷಿತ ಆದಾಯ ಬರದಿದ್ದರೂ ಸಹ ವೆಚ್ಚಗಳಿಗೆ ಒದಗಿಸಿರುವ ಅನುದಾನಕ್ಕೆ ಅನುಗುಣವಾಗಿ ಜಾಬ್ ಸಂಖ್ಯೆಯನ್ನು ಪಡೆದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಪ್ರತಿವರ್ಷ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಬಿಲ್ಲುಗಳ ಅಂತರ ಹೆಚ್ಚಾಗುತ್ತಿದ್ದು, ಬಿ.ಬಿ.ಎಂ.ಪಿ.ಗೆ ಹೆಚ್ಚು ಆರ್ಥಿಕ ಹೊರೆ ಉಂಟಾಗುತ್ತಿರುತ್ತದೆ. ಬಿ.ಬಿ.ಎಂ.ಪಿ.ಯಲ್ಲಿ ವಾಸ್ತವಿಕ ಸ್ವೀಕೃತಿಗೆ ಅನುಗುಣವಾಗಿ ವೆಚ್ಚಗಳಿಗೆ ಅವಕಾಶ ಕಲ್ಪಿಸಿಕೊಳ್ಳುವಂತೆ ಮಾಡುವುದು ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅದಿನಿಯಮ-2003, ಅನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅನ್ವಯಿಸಿ ಜಾರಿಗೆ ತರಲು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಆದ್ದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯಕ್ಕೆ ತಕ್ಕಂತೆ 2019-20ನೇ ಸಾಲಿನ ಆಯವ್ಯಯವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಿ ಕೊಡುವಂತೆ ಕೋರಲಾಗಿರುತ್ತದೆ.

6. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2019-20ನೇ ಸಾಲಿನ ಆಯವ್ಯಯವನ್ನು ರೂ.12957.79 ಕೋಟಿಗಳಿಗೆ ಮಂಡಿಸಲಾಗಿದ್ದು, ಇದನ್ನು 2017-18ನೇ ಸಾಲಿನ ವಾಸ್ತವಿಕ ಲೆಕ್ಕಗಳಿಗೆ ಹೋಲಿಸಿದಲ್ಲಿ ಶೇ.173.61% ರಷ್ಟು ಅಧಿಕವಾಗಿರುತ್ತದೆ. 2018-19ನೇ ಸಾಲಿನ ಅಂದಾಜಿಸಿದ ಲೆಕ್ಕಗಳಿಗೆ ಹೋಲಿಸಿದಲ್ಲಿ ಶೇ.148.09 ರಷ್ಟು ಅಧಿಕವಾಗಿದ್ದು, ಅನುಷ್ಠಾನಗೊಳಿಸುವುದು ಅಸಾಧ್ಯವಾಗಿರುತ್ತದೆ.

7. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ತಮ್ಮ ಪ್ರಸ್ತಾವನೆಯಲ್ಲಿ 2019-20ನೇ ಸಾಲಿನಲ್ಲಿ ಹೆಚ್ಚಿನ ಆದಾಯವನ್ನು ಸಂಗ್ರಹಿಸುವ ಸಲುವಾಗಿ ಪ್ರಸ್ತಾಪಿಸಿರುವ ಅಂಶಗಳ ಆಧಾರದ ಮೇಲೆ 2019-20ನೇ ಸಾಲಿನ ಆಯವ್ಯಯವನ್ನು ರೂ.9000.00 ಕೋಟಿಗಳಿಗೆ ಮಿತಿಗೊಳಿಸಿ ಅನುಮೋದಿಸಬಹುದಾಗಿರುತ್ತದೆ. ಸದರಿ ಮೊತ್ತವು 2017-18ನೇ ಸಾಲಿನ ವಾಸ್ತವಿಕ ಲೆಕ್ಕಗಳಿಗೆ ಹೋಲಿಸಿದಲ್ಲಿ ಶೇ.22.92% ಅಧಿಕವಾಗಿರುತ್ತದೆ ಹಾಗೂ 2018-19ನೇ ಸಾಲಿನ ಅಂದಾಜಿಸಿದ ಲೆಕ್ಕಗಳಿಗೆ ಹೋಲಿಸಿದಲ್ಲಿ ಶೇ.21.95% ಅಧಿಕವಾಗಿದ್ದು, ಅನುಷ್ಠಾನಗೊಳಿಸಬಹುದಾಗಿರುತ್ತದೆ. ವರ್ಷದ ಯಾವುದೇ ಸಮಯದಲ್ಲಿ ಆದಾಯ ಸಂಗ್ರಹವು ರೂ.9000.00 ಕೋಟಿಗಳನ್ನು ಮೀರಿದ್ದಲ್ಲಿ ಕೆ.ಎಂ.ಸಿ

. . . 3 .

(41)

ಕಾಯ್ದೆ-1976ರ ಸೆಕ್ಷನ್ 171 ರಂತೆ ಪೂರಕ ಆಯವ್ಯಯವನ್ನು ಮಂಡಿಸಲು ಅವಕಾಶವಿದ್ದು, ಅದರಂತೆ ಹೆಚ್ಚುವರಿ ಅನುದಾನಕ್ಕೆ ಅನುಮೋದನೆಯನ್ನು ಕೋರಬಹುದಾಗಿರುತ್ತದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

- 2018-19ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳಿಗೆ ಅನುಮೋದನೆ.
- 2019-20ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ಕುರಿತಂತೆ ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-2003ನ್ನು ಜಾರಿಗೆ ತರಲು ಕೋರಿರುವ ಹಿನ್ನಲೆಯಲ್ಲಿ ಹಾಗೂ ಸರ್ಕಾರ ವಾಸ್ತವಿಕ ಆಯವ್ಯಯವನ್ನು ಮಂಡಿಸಲು ಸೂಚಿಸಿರುವ ಮೇರೆಗೆ ವಾಸ್ತವಿಕ ಆರ್ಥಿಕ ಚಿತ್ರಣವನ್ನು ಅವಲೋಕಿಸಿ, ರೂ.9000.00 ಕೋಟಿಗಳಿಗೆ ಮಿತಿಗೊಳಿಸಿ, ಅನುಮೋದನೆ.
- 2019-20ನೇ ಸಾಲಿನ ಆಯವ್ಯಯದ ಶೇ.30ರಷ್ಟು ಅನುದಾನದ ಲೇಖಾನುದಾನಕ್ಕೆ ಪಾಲಿಕೆ ನೀಡಿರುವ ಅನುಮೋದನೆಯನ್ನು ಸ್ಥಿರೀಕರಿಸಿ, ಅನುಮೋದಿಸಲು.

8. ಮೇಲೆ (2) ರಲ್ಲಿ ಓದಲಾದ ದಿನಾಂಕ: 22-05-2019ರ ಸಮ ಸಂಖ್ಯೆಯ ಸರ್ಕಾರದ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2019-20ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡುವಂತೆ ಕೋರಿರುವ ಉಲ್ಲೇಖಿತ ದಿನಾಂಕ: 01-03-2019ರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನಲ್ಲಿ ಸರ್ಕಾರವು ರೂ.10,129.48 ಕೋಟಿಗಳ ಅಂದಾಜಿಗೆ ಅನುಮೋದನೆ ನೀಡಿರುತ್ತದೆ. ಸದರಿ ಅಂದಾಜು ಮೊತ್ತದ ಮೇಲೆ ಶೇ.15% ರಷ್ಟು ಹೆಚ್ಚಿನ ಆಯವ್ಯಯವನ್ನು ಅಂದಾಜಿಸಿ ಬಿ.ಬಿ.ಎಂ.ಪಿ. ಕೌನ್ಸಿಲ್‌ನ ಪ್ರಸ್ತಾಪಿತ ಆಯವ್ಯಯವನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ ಅನುಮೋದಿಸಿದೆ. ಉಳಿಕೆ ಮೊತ್ತವಾದ ರೂ.1,308.89 ಕೋಟಿಗಳಿಗೆ ಬಿ.ಬಿ.ಎಂ.ಪಿ.ಯ ಪೂರಕ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಲಾಗಿರುತ್ತದೆ.

9. ಮೇಲೆ (3) ರಲ್ಲಿ ಓದಲಾದ ದಿನಾಂಕ: 22-08-2019ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ಆದೇಶ ಸಂಖ್ಯೆ: ಸಂಖ್ಯೆ: ನಅಇ 476 ಎಂಎನ್‌ವೈ 2018 (ಭಾಗ-1), ದಿನಾಂಕ: 22-05-2019 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2019-20ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡುತ್ತಾ ಪ್ರಸ್ತಾಪಿತ ಆಯವ್ಯಯವನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ ಅನುಮೋದನೆ ಹಾಗೂ ಉಳಿಕೆ ಮೊತ್ತವಾದ ರೂ.1,308.89 ಕೋಟಿಗಳಿಗೆ ಬಿ.ಬಿ.ಎಂ.ಪಿ.ಯ ಪೂರಕ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳುವಂತೆ ಆದೇಶಿಸಲಾಗಿರುತ್ತದೆ.

10. ಸದರಿ ಆದೇಶವು ಸಚಿವ ಸಂಪುಟದ ಅನುಮೋದನೆ ಪಡೆಯದೆ ಹೊರಡಿಸಿರುವುದರಿಂದ ಈ ವಿಷಯವನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗಿತ್ತು. ಸಚಿವ ಸಂಪುಟ ಟಿಪ್ಪಣಿಯಲ್ಲಿ ಕೆಲವು ಮಾರ್ಪಾಡು ಮಾಡಲು ಅವಕಾಶವಿರುತ್ತದೆ. ಆದ್ದರಿಂದ, ಈ ಟಿಪ್ಪಣಿಯೊಂದಿಗೆ ಲಗತ್ತಿಸಿರುವ ಅನುಬಂಧ-1, 2 ಮತ್ತು 3 ಗಳಲ್ಲಿ ಸೂಚಿಸಿರುವಂತೆ ಸಚಿವ ಸಂಪುಟ ಟಿಪ್ಪಣಿಯನ್ನು ಮಾರ್ಪಡಿಸಿ ಸಲ್ಲಿಸುವಂತೆ ಆದೇಶಿಸಿರುತ್ತಾರೆ.

...4.

11. ಮೇಲ್ಕಂಡ ಅಂಶಗಳನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 476 ಎಂಎನ್‌ವೈ 2018 (ಭಾಗ-1),
ಬೆಂಗಳೂರು, ದಿನಾಂಕ: 28-08-2019.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರವು ಪತ್ರ ಸಂಖ್ಯೆ: ನಅಇ 476 ಎಂಎನ್‌ವೈ 2018 (ಭಾಗ-1), ದಿನಾಂಕ: 22-05-2019 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಬಿ.ಬಿ.ಎಂ.ಪಿ. ಕೌನ್ಸಿಲ್ ಅನುಮೋದಿಸಿರುವ ಪ್ರಸ್ತಾಪಿತ ಆಯವ್ಯಯವನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ ಹಾಗೂ ಉಳಿಕೆ ಮೊತ್ತವಾದ ರೂ.1,308.89 ಕೋಟಿಗಳಿಗೆ ಬಿ.ಬಿ.ಎಂ.ಪಿ.ಯ ಪೂರಕ ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ತಿಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆಯನ್ನು ಮತ್ತು ಪ್ರಸ್ತುತ ಪಾಲಿಕೆಯಿಂದ ಸಲ್ಲಿಸಿಕೆಯಾಗಿರುವ ಆಯವ್ಯಯದಲ್ಲಿನ ವಿವಿಧ ಕಾಮಗಾರಿಗಳು ಮತ್ತು ಅನುದಾನ ಹಂಚಿಕೆಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ-1, 2 ಮತ್ತು 3** ರಲ್ಲಿ ಪರಿಷ್ಕರಿಸಿದಂತೆ ಸರ್ಕಾರವು ಅನುಮೋದನೆಯನ್ನು ನೀಡಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 26-08-2019 ರಂದು ನಡೆದ ಸಚಿವ ಸಂಪುಟ ವಿಷಯ ಸಂಖ್ಯೆ: ಸಿ:494/2019 ರಲ್ಲಿ ಕೈಗೊಂಡ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀ ಸಾಗರ್ .ವಿ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು (ಸಚಿವ ಸಂಪುಟ ಶಾಖೆ), ವಿಧಾನ ಸೌಧ ಬೆಂಗಳೂರು. (ವಿಷಯ ಸಂಖ್ಯೆ: ಸಿ:494/2019, ದಿನಾಂಕ: 26-08-2019).
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Page No	P-Code	Particulars	Amount	Re-Allocation	Savings Amount
129	P 3594	Special Developmental works at Ward No. 80, 86, 112, 113, 122, 144, (7 Cr Each ward) Special Developmental works at Ward No. 86 - 7Cr, 112 - 7Cr, 122 - 2Cr (Re-Allocated 42 Crores to 16 Crores)	4200	1600	2600
129	P 3595	Special Developmental works at Ward No. 33	2000	500	1500
129	P 3597	Special Developmental works at Ward No. 32	1000	500	500
130	P 3602	Special Developmental works at Ward No. 02, 06, 07, 08, 11, 12, 16, 21, 23, 24, 25, 30, 33, 37, 38, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 131, 134, 136, 140, 141, 145, 147, 148, 151, 152, 153, 157, 171, 172, 180, 190, 192, 197, 198 (3Crore in Each ward) Special Developmental works at Ward No. 02, 06, 07, 08, 11, 12, 16, 21, 23, 24, 25, 30, 33, 37, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 131, 134, 136, 140, 141, 145, 147, 148, 151, 152, 153, 157, 171, 172, 180, 190, 192, 197, 198 (1.5 Crore in Each ward)	22500	11100	11400
131	P 3674	Repair & Development of Jayanagar Shopping Complex	500	100	400
131	P 3675	Comprehensive Development works at ward No. 153	1500	500	1000
132	P 3681	Providing Solar wind mill at Sir. MV Commercial Complex, Jayanagar	700	200	500

ಸರ್ಕಾರದ ಆದೇಶ ಕಾರ್ಯದರ್ಶಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
B.B.M.P

ವಿ. ವಿ. ಪಾರ್ಥಿಬರಾಜನ್ (ವಿವಿಪಿ)
ಬಿಬಿಎಂಪಿ ಸದಸ್ಯರು, ಕುವೆಂಪುನಗರ, ವಾರ್ಡ್ ನಂ. 11

V. V. Parthibarajan (VVP)
Corporator, Kuvempunagara, Ward No. 11

39

ರವರಿಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್. ವೃತ್ತ,
ಬೆಂಗಳೂರು.

ಮಾನ್ಯರೇ,

ವಿಷಯ: ವಾರ್ಡ್ ನಂ: 11 (ಕುವೆಂಪುನಗರ) ವ್ಯಾಪ್ತಿಯಲ್ಲಿ 2019–20ನೇ ಸಾಲಿನ ವಿಶೇಷ ಅನುದಾನದಡಿಯಲ್ಲಿ ಮೀಸಲಿಟ್ಟಿರುವ ಅನುದಾನಕ್ಕೆ ಅನುಮೋದನೆ ನೀಡಲು ಹಾಗೂ ಜಾಬ್ ಸಂಕೇತ ನೀಡುವ ಬಗ್ಗೆ.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ನಂ: 11 (ಕುವೆಂಪುನಗರ) ರ ಕಾರ್ಯವ್ಯಾಪ್ತಿಯಲ್ಲಿ ಬರುವ ಶ್ರೀನಿಧಿ ಬಡಾವಣೆ, ಬಾಲಾಜಿ ಬಡಾವಣೆ, ಸಿಂಗಾಪುರ, ಭರತ್‌ನಗರ, ಕುವೆಂಪುನಗರ ಪ್ರದೇಶಗಳಲ್ಲಿ ತುಂಬ ಹಿಂದುಳಿದ ಪ್ರದೇಶಗಳಾಗಿದ್ದು, ಸದರಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ವಂಚಿತವಾಗಿರುವ ಪ್ರದೇಶಗಳಾಗಿರುತ್ತದೆ. ಸದರಿ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ ಮತ್ತು ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಸದರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು **2019–20ನೇ ಸಾಲಿನ ಅಯವ್ಯಯದಲ್ಲಿ ಪುಟ್ಟ ಸಂಖ್ಯೆ: 130ರ ಪಿ–3602 ರ ಅಡಿಯಲ್ಲಿ ರೂ. 150.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಸದರಿ ಅನುದಾನಕ್ಕೆ ಜಾಬ್ ಸಂಕೇತ ಮತ್ತು ಅನುಮೋದನೆ ನೀಡಲು ಕೋರುತ್ತೇನೆ.**

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	Construction of Bridge at Singapura Paradise in Ward No. 11 (Kuvempunagara).	40.00
2	Asphalting to Roads at Balaji Layout and Surrounding areas in Ward No. 11 (Kuvempunagara).	25.00
3	Asphalting to Roads at Singapura and Surrounding areas in Ward No. 11 (Kuvempunagara).	25.00
4	Asphalting to Roads at Bharathnagara and Surrounding areas in Ward No. 11 (Kuvempunagara).	30.00
5	Asphalting to Roads at Kuvempunagara and Surrounding areas in Ward No. 11 (Kuvempunagara).	30.00
	Total	**150.00**

ಸದರ ಕಾಮಗಾರಿಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಜಾಬ್ ಸಂಕೇತ ನೀಡಲು ಈ ಮೂಲಕ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ವಿ.ವಿ ಪಾರ್ಥಿಬರಾಜನ್
ಪಾಲಿಕೆ ಸದಸ್ಯರು, ವಾರ್ಡ್ ನಂ. 11

92, Varadarajanagar, Vidyaranyapura Post, Bangalore - 560097 | E-mail : vvparthibarajan@gmail.com | ✆ 9880609525